## ನಾಂದಿಪದ



# ಕವಿಗೆ ನಮಸ್ಕಾರ

ನಾಲಗೆಯಲ್ಲಿ ಉಳಿಯಬಹುದಾದ ಕೆಲವಾದರೂ ಸಾಲುಗಳ ಮೂಲಕ ಸಶಕ್ತ ಕವಿಯೊಬ್ಬ ಸಹೃದಯರ ನೆನಪಿನಲ್ಲಿ ಉಳಿಯುತ್ತಾನೆ. ಅಂಥ ಸಶಕ್ತ ಕವಿಗಳಲ್ಲೊಬ್ಬರು ಗಂಗಾಧರ ಚಿತ್ತಾಲ. ಬದುಕಿನ ಸಂಕಟಗಳನ್ನೇ ಕಾವ್ಯದ ಜೀವದ್ರವ್ಯವಾಗಿಸಿಕೊಂಡವರು ಚಿತ್ತಾಲ. ಗಾಂಧಿ ಮಹಾತ್ಮನ ಕುರಿತ ಅವರ 'ಮಹಾತ್ಮ' ಕವಿತೆಯಲ್ಲಿನ, 'ನರನು ಕೆರಳುವ ಹುಂಬ, ಬಾಳು ಯೂಪಸ್ತಂಭ/ ಉತ್ತಮರ ಬಲಿ ಇಲ್ಲಿ-ಬಾನಾಡಿತು' ಎನ್ನುವ ಸಾಲುಗಳು ವೈಯಕ್ತಿಕ ನೆಲೆಗಟ್ಟನ್ನು ಮೀರಿ, ಇತಿಹಾಸದಿಂದ ಪಾಠ ಕಲಿಯದ ಮನುಕುಲದ ನಿರಂತರ ಯಡವಟ್ಟುಗಳನ್ನು ಕಾಣಿಸುತ್ತಿದೆ. ಅಂತರಂಗದ ಜಿಡ್ಡನ್ನು ಉಜ್ಜುವ ಶಕ್ತಿಯ ಇಂಥ ಉಜ್ವಲ ಸಾಲುಗಳಿಂದಲೇ ಚಿತ್ತಾಲರು ಕನ್ನಡದ ಮುಖ್ಯ ಕವಿಗಳಲ್ಲೊಬ್ಬರಾಗಿ ಉಳಿದುಬಂದಿದ್ದಾರೆ. ಜನ್ಮಶತಮಾನೋತ್ಸವ ಸಂದರ್ಭದಲ್ಲಿ, ಗಂಗಾಧರ ಚಿತ್ತಾಲರನ್ನು 'ಮಯೂರ' ಪ್ರೀತಿಯಿಂದ ನೆನಪಿಸಿಕೊಂಡಿದೆ, ಸಂಭ್ರಮಿಸಿದೆ. ಚಿತ್ತಾಲರ ಕಾವ್ಯದ ಕುರಿತು ಕನ್ನಡದ ಇಬ್ಬರು ವಿಮರ್ಶಕರು ಬರೆದ ಲೇಖನಗಳು, ಆಧುನಿಕ ಕನ್ನಡ ಸಾಹಿತ್ಯದ ವಿಶಿಷ್ಟ ಕವಿಯನ್ನು ಹೊಸ ತಲೆಮಾರಿಗೆ ದಾಟಿಸುವ ಪ್ರಯತ್ನಗಳಾಗಿವೆ. ಈ ಬರಹಗಳು ಚಿತ್ತಾಲರ ಕಾವ್ಯದ ಅವಲೋಕನಕ್ಕೆ ಸಹೃದಯರನ್ನು ಒತ್ತಾಯಿಸುತ್ತವೆ, ಪ್ರೇರೇಪಿಸುತ್ತವೆ ಎನ್ನುವುದು 'ಮಯೂರ'ದ ನಂಬುಗೆ.

ಹಿಂದಿ ಪರಿಸರದಲ್ಲಿ ಕನ್ನಡದ ಕಂಪು ಹರಡುತ್ತಿರುವ ಪ್ರೊ. ಬಿ.ವೈ. ಲಲಿತಾಂಬ ಅವರ ಬರಹ-ಬದುಕನ್ನು ಪರಿಚಯಿಸಿವ ಲೇಖನ ಈ ಸಂಚಿಕೆಯ ವಿಶೇಷಗಳಲ್ಲೊಂದು. ಈ ಬರಹದೊಂದಿಗೆ, ಮೂವರು ಬರಹಗಾರ್ತಿಯರ ಇತ್ತೀಚಿನ ಕೃತಿಗಳ ಕುರಿತ ವಿಮರ್ಶಾ ಬರಹಗಳು ಹಾಗೂ 'ಕಾವ್ಯಸಂಕ'ದಲ್ಲಿನ ಶ್ರೀಲಂಕಾದ ಕವಯಿತ್ರಿ ಮಿಜ್ರಾ ಜಬ್ಬಾರ್ ಅವರ ಕಾವ್ಯ-ಸಂದರ್ಶನವನ್ನೂ ಗಮನಿಸಿದರೆ, ಮಾರ್ಚ್ ಸಂಚಿಕೆಗೆ 'ಮಹಿಳಾ ಸಂಚಿಕೆ'ಯ ಸ್ವರೂಪವೂ ಇದೆ. 'ಮಯೂರ'ದ ಇತ್ತೀಚಿನ ಸಂಚಿಕೆಗಳಲ್ಲಿ ಲೇಖಕಿಯರ ಸಹಭಾಗಿತ್ವ ಗಣನೀಯ ಪ್ರಮಾಣದಲ್ಲಿರುವುದನ್ನು ಸಹೃದಯರು ಗಮನಿಸಬಹುದು. ಈ ಬೆಳವಣಿಗೆ, ಕನ್ನಡ ಸಾಹಿತ್ಯದ ಪ್ರಮುಖ ಧ್ವನಿಯಾಗಿ ಬರಹಗಾರ್ತಿಯರು ಗುರ್ತಿಸಿಕೊಳ್ಳುತ್ತಿರುವುದನ್ನು ಹಾಗೂ ಕನ್ನಡ ಸಾಹಿತ್ಯದ ನಾಳೆಗಳ ದೆಸೆಯನ್ನು ಸೂಚಿಸುತ್ತಿರುವಂತಿದೆ.

ಎಂದಿನಂತೆ- ಹಳೆ ಬೇರು ಹೊಸ ಚಿಗುರಿನಂತೆ- ವಿವಿಧ ವಯೋಮಾನಗಳ ಕವಿ-ಕಥೆಗಾರರ ರಚನೆಗಳನ್ನು ಈ ಸಂಚಿಕೆಯೂ ಒಳಗೊಂಡಿದೆ. ಪರಿಸರದಲ್ಲೂ ಸಮಾಜದಲ್ಲೂ ಏರುತ್ತಿರುವ ಧಗೆಯ ದಿನಗಳಲ್ಲಿ ಸಾಹಿತ್ಯದ ಈ ಹೊಸ ಕೊಯಿಲು ಓದುಗರ ಮನಸ್ಸಿಗೆ ಕೊಂಚವಾದರೂ ಸಮಾಧಾನ ತರಬಹುದು.

**ಮಯೂರ ಬಳಗ**

editormy@mayura.co.in